## ಎಲೆಮರೆಯ ಕಾಯಿಯಂತಿರುವ ಹೆಮ್ಮೆಯ, ಕಾಯಕಯೋಗಿ ಶಿಕ್ಷಕ ಶ್ರೀ ಶಂಕರಗೌಡ ಬಸಾಪೂರ.

ಶ್ರೀ ಶಂಕರಗೌಡ ಬಸಾಪೂರ ಪ್ರೌಢ ಶಾಲಾ ವಿಜ್ಞಾನ ಶಿಕ್ಷಕರು ಸ.ಪ.ಪೂ.ಕಾ(ಪ್ರೌ.ಶಾ.ವಿ) ಹಿರೇಮ್ಯಾಗೇರಿ ತಾ:ಯಲಬುರ್ಗಾ ಜಿ:ಕೊಪ್ಪಳ
ಸ್ವಂತ ಊರು: ಕೇಸೂರ-ದೋಟಿಹಾಳ ತಾ:ಕುಷ್ಟಗಿ ಜಿ:ಕೊಪ್ಪಳ ಸೇವೆ:**20** ವರ್ಷ
ಇವರು **2004**ರಲ್ಲಿ ಶಿಕ್ಷಕರಾಗಿ ಶಿರಸಿಯಲ್ಲಿ ನೇಮಕ ಹೊಂದಿ ನಂತರ ಕುಷ್ಟಗಿ ತಾಲೂಕಿನ ಕಡೆಕೊಪ್ಪದಲ್ಲಿ, ಈಗ ಯಲಬುರ್ಗಾ ತಾಲೂಕಿನ ಹಿರೇಮ್ಯಾಗೇರಿ ಪ್ರೌಢ ಶಾಲಾ ವಿಜ್ಞಾನ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರು ಹಿರೇಮ್ಯಾಗೇರಿ ಪ್ರೌಢ ಶಾಲೆಯ ವಿದ್ಯಾರ್ಥಿ, ಸಿಬ್ಬಂದಿ ಸಹಕಾರದಿಂದ ಮತ್ತು ಊರಿನ ಶಿಕ್ಷಣ ಪ್ರೇಮಿಗಳ ಸಹಕಾರದಿಂದ ಉತ್ತಮ ಶೈಕ್ಷಣಿಕ ಮತ್ತು ಪ್ರಾಕೃತಿಕ ವಾತಾವರಣ ನಿರ್ಮಿಸಲು ಪ್ರಯತ್ನಿಸುತ್ತಿದ್ದಾರೆ. ಇವರ ಶೈಕ್ಷಣಿಕ ಸಾಧನೆ ಮತ್ತು ಸಮಾಜ ಸೇವೆಗೆ ವಿಜಯ ಮಹಾಂತೇಶ ಇಲಕಲ್ ಸಂಸ್ಥೆಯು "ಸಮಾಜ ಮಾತೆ" ಪ್ರಶಸ್ತಿ ನೀಡಿ ಗೌರವಿಸಿದೆ, ಇನ್ನು ಅನೇಕ ಪ್ರಶಸ್ತಿಗಳು ಮತ್ತು ಸನ್ಮಾನಗಳು ಲಭಿಸಿವೆ. ಇತ್ತಿಚೆಗೆ ಬಸವ ಜ್ಯೋತಿ ಶಿಕ್ಷಣ ಸಂಸ್ಥೆಯು "ಬಸವ ಜ್ಯೋತಿ" ಪ್ರಶಸ್ತಿ ನೀಡಿ ಗೌರವಿಸಿದೆ.

**1.**ಇವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ತಯಾರಿಸಿದ ನವೀನ ವಿಜ್ಞಾನ ಮಾದರಿಗಳು, ವಿಜ್ಞಾನ ವಸ್ತುಪ್ರದರ್ಶನದಲ್ಲಿ ಸತತವಾಗಿ ಏಳುಬಾರಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿತ್ತು.. ಎರಡುಬಾರಿ ರಾಷ್ಟ್ರಮಟ್ಟಕ್ಕೆಆಯ್ಕೆ.. ಒಂದು ಬಾರಿ ರಾಷ್ಟ್ರ ಮಟ್ಟದಲ್ಲಿ ದ್ವಿತಿಯ ಸ್ಥಾನ ಪಡೆದಿತ್ತು.

**2.**ಮಕ್ಕಳ ಮತ್ತು ಶಿಕ್ಷಕರ ಸ್ವಯಂ ಕಲಿಕೆಗೆ ವೆಬ್ಸೈಟ್ ಮಾದರಿಯ ಬ್ಲಾಗರ್
ಇದು ಕೊಪ್ಪಳ ಜಿಲ್ಲೆಯ ಅತ್ಯುತ್ತಮ ಶೈಕ್ಷಣಿಕ ಬ್ಲಾಗರ್ ಎಂಬ ಹೆಗ್ಗಳಕೆಯನ್ನು ಪಡೆದಿದೆ.ಈ ಬ್ಲಾಗರ್
**8,9** ಮತ್ತು **10** ನೇ ತರಗತಿ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಉಪಯುಕ್ತವಾಗಿದೆ.
**Google** ನಲ್ಲಿ **Shankargouda Basapur** ಎಂದು **Search** ಮಾಡಿ ಇವರ ಬ್ಲಾಗರ್ ವೀಕ್ಷಿಸಬಹುದು..

**3. Youtube** ಚಾನೆಲ್ **:** ಕಲಿಕೆಗೆ ಸಂಬಂಧಿಸಿ ಅನೇಕ ವಿಡಿಯೋಗಳನ್ನುಅಪ್ಲೋಡ್ ಮಾಡಿದ್ದಾರೆ.
**Youtube** ನಲ್ಲಿ **Shankargouda Basapur** ಎಂದು **Search** ಮಾಡಿ ವೀಕ್ಷಿಸಬಹುದು..

**4.**ಚಟುವಟಿಕೆ ಚಕ್ರಗಳ ಪಾಸಿಂಗ್ ಪ್ಯಾಕೇಜ್ **:**ಸಂತಸದಾಯಕ, ಚಟುವಟಿಕೆಯ ಮೂಲಕ ಕಲಿಕೆಯನ್ನು ಉಂಟು ಮಾಡುತ್ತದೆ

**5.DQ10(Daily Question 10)** ಕಾರ್ಯಕ್ರಮ **:** ಹೊಸ ಪರಿಕಲ್ಪನೆ **DQ10**. ಇದು ಈಗಲೂ ಪ್ರಯೋಜನಕಾರಿಯಾಗಿದೆ.

**6. CCE ಸಾಫ್ಟ್‌ವೇರ್ ತಯಾರಿಕೆ** : ಶಿಕ್ಷಕರ ಮತ್ತು ಮಕ್ಕಳ ಸಮಯ ಉಳಿತಾಯ ಮಾಡುವ ಸಾಪ್ಟವೇರ್. ವಿಷಯವಾರು ಅಂಕಗಳನ್ನು ತುಂಬಿದರೆ, ಅದು ಗ್ರೇಡ್, ಒಟ್ಟು,ಶೇಕಡವಾರು, ವಿಷಯವಾರು ವೈಯಕ್ತಿಕ, ಕ್ರೋಢೀಕೃತ ಶಿಕ್ಷಕರು ನಿರ್ವಹಿಸಬೇಕಾದ ದಾಖಲೆಗಳು, ಇತ್ಯಾದಿ ಅಂಶಗಳು ಸ್ವಯಂಚಾಲಿತವಾಗಿ ತಯಾರಿ ಮಾಡಿಕೊಡುತ್ತದೆ. ಈ ಸಾಫ್ಟ್‌ವೇರ್ ನ್ನು **(Free)** ಉಚಿತವಾಗಿ ಬಳಸಿಕೊಳ್ಳಬಹುದು ಬಹಳಷ್ಟು ಶಾಲೆಗಳಲ್ಲಿ ಉಪಯೋಗವಾಗುತ್ತಿವೆ.

**7.IT (Income Tax) ಮತ್ತು MDM** ಮಧ್ಯಾಹ್ನದ ಬಿಸಿಯೂಟದ ಸಾಫ್ಟ್‌ವೇರ್ ತಯಾರಿಕೆ.

**8.** ಕರೋಕೆ ಜೊತೆ ವಿಜ್ಞಾನ ಎಂಬ ಹೊಸ ವಿಡಿಯೋಗಳ ಪ್ರಯೋಗ
ಸಂಗೀತಕ್ಕೆ ತಲೆದೂಗದ ಮನಸುಗಳಿಲ್ಲ ವಿಜ್ಞಾನದ ಎಲ್ಲಾಅಧ್ಯಾಯಗಳನ್ನು ಸಂಗೀತದ ಕರೋಕೆ ಜೊತೆ, ವಿಜ್ಞಾನದ ಪ್ರಾಸಪದಗಳನ್ನು ಸೇರಿಸಿ ಕರೋಕೆ ಹಾಡುಗಳನ್ನು ತಯಾರಿಸಿದ್ದಾರೆ. ಅಧ್ಯಾಯದಲ್ಲಿನ ಪರಿಕಲ್ಪನೆಗಳನ್ನು ವಿಡಿಯೋಗಳಲ್ಲಿ ಅಳವಡಿಸಿದ್ದಾರೆ. ಮಕ್ಕಳಲ್ಲಿ ವಿಜ್ಞಾನವನ್ನುಮನರಂಜನೆಯೊಂದಿಗೂ (ಸಂಗೀತದೊಂದಿಗೂ) ಕಲಿಯುವಂತೆ ಮಾಡಿರುವುದು ಒಂದು ಹೊಸ ಸಾಧನೆ

**9.** ವಿಜ್ಞಾನ ಥಟ್ ಅಂತ ಹೇಳಿ ಕಾರ್ಯಕ್ರಮ**:** ತಾವೇ ತಯಾರಿಸಿದ ಬಜರ್ ಮತ್ತು ಲೈಟ್ ಗಳಿಂದ ಏಕಕಾಲಕ್ಕೆ ಆರುವಿದ್ಯಾರ್ಥಿಗಳನ್ನುಕೂಡಿಸಿಕೊಂಡು ವಿಜ್ಞಾನ ಥಟ್ ಅಂತ ಹೇಳಿ ಕ್ವಿಜ್ ಮಾಡುವರು.

**10. UP AP** ಕಾರ್ಯಕ್ರಮ (ಉತ್ತಮ ಫಲಿತಾಂಶಕ್ಕಾಗಿ ಅಂತಿಮ ಪ್ರಯತ್ನ)
ಪರೀಕ್ಷಾ ಒತ್ತಡ ಕಡಿಮೆಯಾಗಿ ಆತ್ಮ ವಿಶ್ವಾಸ ಮೂಡುವಂತೆ ಮಾಡುವ ಕಾರ್ಯಕ್ರಮವಾಗಿದೆ.

**11.** ಸ್ವಯಂಚಾಲಿತ ಪಿರಿಯಡ್ ಬೆಲ್
ಪಿರಿಯಡ್ ತಕ್ಕಂತೆ ಸ್ವಯಂಚಾಲಿತ ಬೆಲ್ ನ್ನು ಕಡಿಮೆ ವೆಚ್ಚದಲ್ಲಿ ತಯಾರಿಸಿದ್ದಾರೆ.

**12.** ಪ್ರಾಯೋಗಿಕ ಜೊತೆಗೆ ಎನಿಮೇಟೆಡ್ **PhET** ಬಳಸಿ ಬೋದನೆ.

**13.** ಹಸಿರು ಪಡೆ.**(Go green)**: ಹಚ್ಚಿದ ಗಿಡಗಳು ಮಂಗ, ಊರ ದನಗಳ ಮತ್ತು ಕಿಡಗೇಡಿಗಳಿಂದ ಹಾಳಾಗುತ್ತಿದ್ದವು.. ಶಾಲಾ ಆವರಣ ಹಸಿರಿನಿಂದ ಕೂಡಿರಲಿ ಎಂದು, ಹಳೆ ವಿದ್ಯಾರ್ಥಿಗಳ ಮುಖ್ಯ ಶಿಕ್ಷಕರ ಮತ್ತು ಸಿಬ್ಬಂದಿ ದಾನಿಗಳ ಸಹಕಾರದಿಂದ ಗಿಡಗಳಿಗೆ ರಕ್ಷಣೆ, ತಂತಿಬೇಲಿಗಳನ್ನು ಹಾಕುವುದರ ಮೂಲಕ ಶಾಲಾ ಮಕ್ಕಳ ಸಹಕಾರದಿಂದ ಗಿಡಗಳನ್ನು ಹಚ್ಚುವುದರ ಜೊತೆಗೆ ಅವುಗಳ ರಕ್ಷಣೆ ಮತ್ತು ಪೋಷಣೆ ಮಾಡುತ್ತಿದ್ದಾರೆ **100**ಕ್ಕೂ ಹೆಚ್ಚು ಗಿಡ ಮರಗಳನ್ನು ಬೆಳೆಸಿದ್ದಾರೆ..ರಜಾ ದಿನಗಳಂದು ಈ ಕಾರ್ಯ ಹಮ್ಮಿಕೊಳ್ಳುತ್ತಿದ್ದಾರೆ. ಇದೊಂದು ದೊಡ್ಡ ಸವಾಲಿನ ಕೆಲಸವಾಗಿದೆ ಎನ್ನುತ್ತಾರೆ ಈ ಶಿಕ್ಷಕರು.

**14.** ರಾಷ್ಟ್ರೀಯ ಪೋಷಣ ಅಭಿಯಾನ**:** ವಿವಿಧ ಧಾನ್ಯಗಳಿಂದ ವಿಜ್ಞಾನ ಚಿತ್ರಗಳನ್ನು ಬಿಡಿಸುವ ಕಾರ್ಯಕ್ರಮ ಹಮ್ಮಿಕೊಂಡು ಆ ಧಾನ್ಯಗಳಲ್ಲಿನ ಪೋಷಕಾಂಶಗಳನ್ನು ತಿಳಿಯುವಂತೆ ಮಾಡುತ್ತಾರೆ.

**15.** ದೀವಿಗೆ ಕಾರ್ಯಕ್ರಮ (ದೀಪಾವಳಿಯಲ್ಲಿ ವಿಜ್ಞಾನ ಗೆರೆ ಕಾರ್ಯಕ್ರಮ)
ದೀಪಾವಳಿಯಲ್ಲಿ ಗಂಡುಮಕ್ಕಳು ಆಕಾಶಬುಟ್ಟಿಯಲ್ಲಿ ವಿಜ್ಞಾನಚಿತ್ರಗಳನ್ನು ಬಿಡಿಸಿ ಬೆಳಕಿನ ವ್ಯವಸ್ಥೆಯನ್ನು ಮಾಡಿರುತ್ತಾರೆ. ಮತ್ತೆ ಹೆಣ್ಣುಮಕ್ಕಳು ವಿಜ್ಞಾನದ ರಂಗೋಲಿ ಚಿತ್ರಬಿಡಿಸಿ ಅದರ ಮೇಲೆ ದೀಪಗಳ ಅಲಂಕಾರ ಮಾಡಿ ಸಂಭ್ರಮಿಸುತ್ತಾರೆ

**16.** ಪ್ರತಿ ವರ್ಷ ಪವಾಡ ಬಯಲು ಮತ್ತು ವಿಜ್ಞಾನ ವಸ್ತ ಪ್ರದರ್ಶನ ಕಾರ್ಯಕ್ರಮ

**17.** ತರಗತಿ ಕೋಣೆಯಲ್ಲಿ ವಿಜ್ಞಾನದ ಪಾಸಿಂಗ್ ಪ್ಯಾಕೇಜ್ ಲೇಪನ:
ಮಕ್ಕಳು ಉತ್ತಮ ಫಲಿತಾಂಶ ಪಡೆಯಲು ಸಹಾಯಕವಾಗಿದೆ.

**18.**ಸುಲಭವಾಗಿ ಕನ್ನಡ ಓದುವಂತೆ ಮಾಡಲು ಕನ್ನಡ ಕಲಿಕೋಪಕರಣಗಳ ತಯಾರಿಕೆ ಮಾಡಿದ್ದಾರೆ.

**19.** ಪ್ರತಿವರ್ಷ **10**ನೇತರಗತಿ ಒಬ್ಬ ಬಡ ವಿದ್ಯಾರ್ಥಿಯ ದತ್ತು....
ಪ್ರತಿವರ್ಷ **10**ನೇತರಗತಿ ಒಬ್ಬ ಬಡವಿದ್ಯಾರ್ಥಿಯ ಶೈಕ್ಷಣಿಕ ಅವಶ್ಯಕತೆ ಪೂರೈಸಲು ದತ್ತು ಪಡೆಯುತ್ತಾರೆ.

**20.** ದಿನಕಥೆ :ಮಕ್ಕಳಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸಲು,ವಿಶೇಷ ಸಾಧನೆ ಮಾಡಲು ಪ್ರೋತ್ಸಾಹಿಸುವ ಸ್ಪೂರ್ತಿ ತುಂಬುವ, ಪ್ರಚಲಿತ ವಿದ್ಯಮಾನವನ್ನು ತಿಳಿಸಲು ದಿನಕಥೆ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಇದು ಸತತ **500** ದಿನಗಳನ್ನುಪೂರೈಸಿ ಮುಂದೆ ಸಾಗುತ್ತಿದೆ..

**21.** ವಿಜ್ಞಾನ ಸಂಪನ್ಮೂಲ ಶಿಕ್ಷಕರಾಗಿ **:** ವಿಜ್ಞಾನ, , **ILP,** ಕಲಿಕಾ ಹಬ್ಬ ಸಂಪನ್ಮೂಲ ಶಿಕ್ಷಕರಾಗಿ**,** ಚುನಾವಣಾ **Master Trainer** ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ, ಚುನಾವಣೆ ತರಬೇತಿಗೆ ಉತ್ತಮ ಪಿಪಿಟಿ ತಯಾರಿಸುತ್ತಾರೆ. ಅದರ ಸಂಪನ್ಮೂಲಗಳು ಚುನಾವಣೆ ಕಾರ್ಯ ಮಾಡಲು ನೌಕರರಿಗೆ ಅನುಕೂಲವಾಗಲೆಂದು ಬ್ಲಾಗರ್ ನಲ್ಲಿ **Election Page** ತಯಾರಿಸಿದ್ದಾರೆ..

**22 .**ಉತ್ತಮ ಪ್ರಯೋಗಾಲಯ ಸ್ಥಾಪನೆಗೆ ಪ್ರಯತ್ನ **:** ವಿಜ್ಞಾನ ಬೋಧಿಸಲು ಅನುಕೂಲವಾಗಲೆಂದು ದಾನಿಗಳ ಸಹಕಾರದಿಂದ ಹಿರೇಮ್ಯಾಗೇರಿಯಲ್ಲಿ ಭವಿಷ್ಯದ ಉತ್ತಮ ಪ್ರಯೋಗಾಲಯ ಸ್ಥಾಪಿಸಲು ಪ್ರಯತ್ನಮಾಡುತ್ತಿದ್ದಾರೆ.. ಅದಕ್ಕಾಗಿ ವೈಯಕ್ತಿಕ **40000** ರೂ.ಗಳ ದೇಣಿಗೆ ನೀಡಿದ್ದಾರೆ ಮತ್ತು ಹಳೇ ವಿದ್ಯಾರ್ಥಿಗಳು, ಸಿಬ್ಬಂದಿ, ಶಿಕ್ಷಣ ಪ್ರೇಮಿಗಳ ಸಹಾಯದಿಂದ **100000** ರೂ.ಗಳ ಕೆಲಸ ನಿರ್ವಸಿದ್ದಾರೆ. ದಾನಿಗಳ ಸಹಕಾರ ಕೋರಿದ್ದಾರೆ. ಹೀಗೆ ಇನ್ನೂ ಅನೇಕ ಕಾರ್ಯಕ್ರಮಗಳನ್ನು ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ಹಮ್ಮಿಕೊಂಡಿದ್ದಾರೆ.

ಈ ಶಿಕ್ಷಕರು ಅನೇಕ e-ಕಂಟೆಂಟ್ ತಯಾರಿಸಿ ಬ್ಲಾಗರ್ ಗೆ ಅಪ್ಲೋಡ್ ಮಾಡಿದ್ದಾರೆ.
ಹೀಗೆ ಇವರಿಂದ ಶಿಕ್ಷಣ ಕ್ಷೇತ್ರಕ್ಕೆ ಇನ್ನು ಅನೇಕ ಕೊಡುಗೆಗಳು ಬರಲಿ ಎಂದು ಶುಭ ಹಾರೈಸೋಣ.
ಕೆಳಗಿನ **QR Code** ಸ್ಕಾನ್ ಮಾಡಿ ಅವರ ಕಾರ್ಯಗಳನ್ನು ವೀಕ್ಷಿಸಬಹುದು.